# ಮತ್ತೆ ರವಿಶಂಕರ್ ಆ್ಯಕ್ಷನ್ ಕಟ್





ನಟ ರವಿಶಂಕರ್ ಇಪ್ಪತ್ತು ವರ್ಷಗಳ ನಂತರ ಮತ್ತೆ ನಿರ್ದೇಶನದತ್ತ ಮರಳಿದ್ದಾರೆ. ತಮ್ಮ ಮಗನಿಗಾಗಿ ಆ್ಯಕ್ಷನ್ ಕಟ್ ಹೇಳಲು ಸಿದ್ಧತೆ ನಡೆಸುತ್ತಿದ್ದಾರೆ.

ಖಳನಟನಾಗಿ ಚಿರಪರಿಚಿತರಾಗಿರುವ ರವಿಶಂಕರ್, ನಟನಾ ವೃತ್ತಿ ಆರಂಭಿಸಿದ್ದು ತೆಲುಗು ಚಿತ್ರರಂಗದಲ್ಲಿ. ಆನಂತರ ಕನ್ನಡ ಭಾಷೆಯಲ್ಲಿ ಜನಪ್ರಿಯರಾದ ಅವರು, 'ಕೆಂಪೇಗೌಡ' ಚಿತ್ರದಿಂದ ಪ್ರಾರಂಭಿಸಿ ಸುದೀಪ್ ಜೊತೆಗಿನ ಸಿನಿಮಾಗಳಲ್ಲಿ ಖಳನಟರಾಗಿ ಮನೆ ಮಾತಾದರು. ಖಳನಾಯಕನಾಗಿ ಮಾತ್ರವಲ್ಲ, ಜನರನ್ನು ರಂಜಿಸಲೂ ಸೈ ಎಂಬುದನ್ನು 'ವಿಕ್ಟರಿ', 'ಅಧ್ಯಕ್ಷ' ಸಿನಿಮಾಗಳ ಮೂಲಕ ತೋರಿದರು.

ನಟನೆ, ನಿರ್ದೇಶನ, ಬರಹ, ಡಬ್ಬಿಂಗ್... ಹೀಗೆ ಸಿನಿಮಾರಂಗದ ಹಲವು ಕವಲುಗಳಲ್ಲಿ ತೊಡಗಿರುವ ರವಿಶಂಕರ್, 2004ರಲ್ಲಿ ಮಾಲಾಶ್ರೀ ಅಭಿನಯದ 'ದುರ್ಗಿ' ಚಿತ್ರ ನಿರ್ದೇಶಿಸಿದ್ದರು. ಆನಂತರ ಸಂಪೂರ್ಣ ನಟನೆಯತ್ತ ಹೊರಳಿದ್ದರು. ಇದೀಗ ಮತ್ತೆ ಡೈರೆಕ್ಟರ್ ಹ್ಯಾಟ್ ತೊಡುತ್ತಿದ್ದಾರೆ.

ತಮ್ಮ ಮಗ ಅದ್ವಯ್‌ಗಾಗಿ ಸಿನಿಮಾ ಮಾಡಲು ರವಿಶಂಕರ್ ಸಿದ್ಧತೆ ನಡೆಸಿದ್ದಾರೆ. ಸಿನಿಮಾ ಟೀಸರ್ ಚಿತ್ರೀಕರಣದಲ್ಲಿ ಮಗ್ನರಾಗಿದ್ದಾರೆ. ವಿಜಯದಶಮಿ ವೇಳೆಗೆ ಚಿತ್ರ ಸೆಟ್ಟೇರುವ ಸಾಧ್ಯತೆಯಿರುವುದಾಗಿ ಮೂಲಗಳು ತಿಳಿಸಿವೆ.

ತೆಲುಗು, ತಮಿಳು ಚಿತ್ರರಂಗದಲ್ಲಿ ಬರಹಗಾರರಾಗಿಯೂ ಗುರುತಿಸಿಕೊಂಡವರು ರವಿಶಂಕರ್. ಕನ್ನಡದಲ್ಲಿ 'ಆರ್ಮುಗಂ ಕೋಟೆ' ಡೈಲಾಗ್‌ನಿಂದ ಮನೆಮಾತಾಗಿ ಇದೀಗ ತಮ್ಮ ಮಗನನ್ನು ಇಲ್ಲಿಂದಲೇ ಪರಿಚಯ ಮಾಡಲು ಹೊರಟಿದ್ದಾರೆ.

'ನಟನೆಯಲ್ಲಿ ಹೆಚ್ಚು ತೊಡಗಿಕೊಂಡಿದ್ದರೂ ನಿರ್ದೇಶನದ ಆಸೆ ನನ್ನೊಳಗೆ ಹಾಗೇ ಇತ್ತು. ಇದೀಗ ಮಗನ ಸಿನಿಮಾಗೆ ನಿರ್ದೇಶಕನಾಗುತ್ತಿದ್ದೇನೆ. ನಾನೇ ಅವನ ಸಿನಿಮಾ ನಿರ್ದೇಶನ ಮಾಡಬೇಕೆಂದು ಬಯಸಿದ್ದೆ. ಅದನ್ನು ಈಡೇರಿಸಿಕೊಳ್ಳುತ್ತಿದ್ದೇನೆ. ಬಹುಭಾಷೆಗಳಲ್ಲಿ ಸಿನಿಮಾ ಹೊರತರುವ ಯೋಜನೆಯಿದೆ' ಎಂದು ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ರವಿಶಂಕರ್ ಅವರ ಮಗ ಅದ್ವಯ್, ನ್ಯೂಯಾರ್ಕ್‌ನ ದಿ ಲೀ ಸ್ಟ್ರಾಸ್‌ಬರ್ಗ್ ಥಿಯೇಟರ್ ಮತ್ತು ಫಿಲ್ಮ್ ಇನ್‌ಸ್ಟಿಟ್ಯೂಟ್‌ನಲ್ಲಿ ತರಬೇತಿ ಪಡೆದಿದ್ದಾರೆ. ತಮ್ಮ ತಂದೆಯ ಚಿತ್ರದ ಮೂಲಕವೇ ಚಂದನವನ ಪ್ರವೇಶಿಸುತ್ತಿದ್ದಾರೆ. ಅಕ್ಟೋಬರ್ ವೇಳೆಗೆ ಸಿನಿಮಾ ಟೀಸರ್ ಬಿಡುಗಡೆಯಾಗಲಿದೆ. ■



# ಪ್ರೀತಿಯ ಸಾಹಸ ಹಾದಿ ಬಾನದಾರಿ...

'ಅನುರಾಗ, ಭಾವನೆ, ಪಯಣ... ಇವನ್ನೊಳಗೊಂಡ ಪ್ರೀತಿಯ ಸಾಹಸಕಥೆಯನ್ನು ಈ ಸಿನಿಮಾ ನೀಡಲಿದೆ...' ಎಂದು ತಮ್ಮ 'ಬಾನದಾರಿಯಲ್ಲಿ' ಸಿನಿಮಾ ಕುರಿತು ಮಾತನಾಡಿದ್ದಾರೆ ನಿರ್ದೇಶಕ ಪ್ರೀತಂ ಗುಬ್ಬಿ.

ಪ್ರೀತಂ ಗುಬ್ಬಿ ನಿರ್ದೇಶಿಸಿರುವ ಈ ಸಿನಿಮಾ ಇದೇ ಸೆಪ್ಟೆಂಬರ್ 28ಕ್ಕೆ ತೆರೆಗೆ ಬರುತ್ತಿದ್ದು, ಗಣೇಶ್, ರುಕ್ಮಿಣಿ ವಸಂತ್, ರೀಷ್ಮಾ ನಾಣಯ್ಯ ಹಾಗೂ ರಂಗಾಯಣ ರಘು ಮುಖ್ಯಭೂಮಿಕೆಯಲ್ಲಿ ನಟಿಸಿದ್ದಾರೆ.

'ಸಿನಿಮಾದ ಇಡೀ ವಿನ್ಯಾಸ ಚೆನ್ನಾಗಿ ಮೂಡಿಬಂದಿದೆ. ಪ್ರತಿ ಚೌಕಟ್ಟಿನಲ್ಲೂ ಹೊಸತನ ಕಾಣುತ್ತದೆ. ಕೀನ್ಯಾದ ಮಸ್ಸೈಮರಾ ಅರಣ್ಯದಲ್ಲಿ ಸಿನಿಮಾ ಚಿತ್ರೀಕರಿಸಲಾಗಿದೆ. ಮಸ್ಸೈಮರಾದಲ್ಲಿ ಚಿತ್ರೀಕರಿಸಲಾದ ಮೊದಲ ಕನ್ನಡ ಸಿನಿಮಾ ಇದು. ಅಲ್ಲಿನ ಇಡೀ ಹಳ್ಳಿಯ ಜನರನ್ನು ಸಿನಿಮಾ ಒಳಗೊಂಡಿದೆ. ಈ ಪ್ರಕ್ರಿಯೆ ಸುಲಭವಾಗಿರಲಿಲ್ಲ' ಎಂದು ಪ್ರೀತಂ ಸಿನಿಮಾ ಚಿತ್ರೀಕರಣದ ಬಗ್ಗೆ ವಿವರಿಸಿದ್ದಾರೆ.

'ಮೂರು ದಿನ ಅಲ್ಲಿ ಚಿತ್ರೀಕರಣ ನಡೆಸಿದ್ದು ನಿಜಕ್ಕೂ ಸವಾಲಾಗಿತ್ತು. ಮಸ್ಸೈ ಬುಡಕಟ್ಟು ಜನರು ಕೂಡ ಈ ಸಿನಿಮಾದಲ್ಲಿದ್ದಾರೆ. ಅವರ ಭಾಷೆಯನ್ನೂ ಸಿನಿಮಾದಲ್ಲಿ ಬಳಸಿಕೊಂಡಿದ್ದೇವೆ. ಅರ್ಜುನ್ ಜನ್ಯ ಸಂಗೀತ, ಸಿನಿಮಾದ ಮತ್ತೊಂದು ಹೈಲೈಟ್' ಎಂದು ಹೇಳಿದ್ದಾರೆ. ■